**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಹೆಚ್ ಎಸ್ ಗೋಪಿನಾಥ್ ರವರು ನಿಯಮ 72ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ:-**

**ಸೂಚನೆ:**

ಬೆಂಗಳೂರು ಮಹಾನಗರ ಪ್ರದೇಶದಲ್ಲಿ ಸಾವಿರಾರು ನಿವೇಶನ ಹಾಗೂ ಮನೆಗಳ ಮಾಲೀಕರಿಗೆ ಸಂಬಂಧಿಸಿದಂತೆ ಸಮಸ್ಯೆಯೊಂದು ಉಂಟಾಗಿದ್ದು, ಗ್ರೇಟರ್ ಬೆಂಗಳೂರು ಅಥಾರಿಟಿ (GBA) ವತಿಯಿಂದ 2021 ರಿಂದ 2026 ರವರೆಗೆ ಆಸ್ತಿ ತೆರಿಗೆ ಪಾವತಿಸಿಲ್ಲ ಎಂದು ಹೇಳಿ ಸಾವಿರಾರು ಮನೆ ಮಾಲೀಕರಿಗೆ ಶೋಕಾಸ್ ನೋಟಿಸ್‌ಗಳನ್ನು ಮನೆ ಮಾಲೀಕರ ಮೊಬೈಲ್ ಸಂಖ್ಯೆಗೆ ಸಂದೇಶ (SMS) ಮುಖಾಂತರವು ಕಳುಹಿಸಲಾಗಿದೆ. ಆದರೆ, ಈ ಮನೆ ಮಾಲೀಕರು SAS (Self Assessment Scheme) ಅಡಿಯಲ್ಲಿ ಇಲ್ಲಿಯವರೆಗೂ ತಮ್ಮ ಆಸ್ತಿ ತೆರಿಗೆಯನ್ನು ನಿಯಮಾನುಸಾರವಾಗಿ ಪಾವತಿಸುತ್ತಾ ಬಂದಿದ್ದಾರೆ. ಇತ್ತೀಚೆಗೆ GBA ಅಧಿಕಾರಿಗಳು ಡ್ರೋನ್ ತಂತ್ರಜ್ಞಾನ ಬಳಸಿ ಕಟ್ಟಡಗಳ ಚಿತ್ರಗಳನ್ನು ಪಡೆದು, ಪ್ರಸ್ತುತ ಕಟ್ಟಡಗಳ ವಿಸ್ತೀರ್ಣ ಹಾಗೂ ಹಿಂದಿನ ತೆರಿಗೆ ಮಾಹಿತಿಯ ನಡುವೆ ಹೊಂದಾಣಿಕೆ ಇಲ್ಲ ಎಂದು ಹೇಳಿ ಸಾವಿರಾರು ರೂಪಾಯಿ ತೆರಿಗೆ ಬಾಕಿ ಇದೆ ಎಂದು ನೋಟಿಸ್ ನೀಡಿದ್ದು, ಇದಲ್ಲದೆ ಬಡ್ಡಿ ಸಮೇತವಾಗಿ ಈ ಮೊತ್ತವನ್ನು 15 ದಿನಗಳ ಒಳಗೆ ಪಾವತಿಸುವಂತೆ ಸೂಚಿಸಲಾಗಿದೆ. ಈ ಕ್ರಮದಿಂದ ಬೆಂಗಳೂರು ಮಹಾನಗರದ ಸಾವಿರಾರು ಕುಟುಂಬಗಳು ಆತಂಕಕ್ಕೆ ಒಳಗಾಗಿವೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳಿಂದ ಸರ್ಕಾರವು ಸ್ಪಷ್ಟ ಮಾಹಿತಿ ಪಡೆದು, ಜನರಿಗೆ ಅನ್ಯಾಯವಾಗದಂತೆ ಈ ವಿಷಯವನ್ನು ಸಮಗ್ರವಾಗಿ ಪರಿಶೀಲಿಸಿ ಸ್ಪಷ್ಟ ಕ್ರಮ ಕೈಗೊಳ್ಳಬೇಕೆಂದು ಕೋರಿರುವ ಬಗ್ಗೆ.

**ಉತ್ತರ:**

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಸಾರ್ವಜನಿಕರ ನಿವೇಶನ /ಕಟ್ಟಡಗಳನ್ನು ಡ್ರೋನ್ ಕ್ಯಾಮೆರಾ ಮುಖಾಂತರ ಸರ್ವೆ ನಡೆಸಿ, ಸರ್ವೆ ಮಾಹಿತಿ ಆಧಾರ ತೆರಿಗೆದಾರರು ಘೋಷಿಸಿಕೊಂಡಿರುವ ಘೋಷಣೆಗಳಲ್ಲಿನ ವಿವರಗಳೊಂದಿಗೆ ತಾಳೆ ಮಾಡಿ, ವ್ಯತ್ಯಾಸ ಕಂಡುಬಂದ ಪ್ರಕರಣಗಳಲ್ಲಿ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ, 2024 ಪ್ರಕರಣ 150 ರ ಅನ್ವಯ ಆಸ್ತಿತೆರಿಗೆ ಪರಿಷ್ಕರಣೆ ಮಾಡಿ ವ್ಯತ್ಯಾಸದ ಮೊತ್ತ, ವ್ಯತ್ಯಾಸದ ಮೊತ್ತಕ್ಕೆ ಸಮನಾದ ದಂಡ ಮತ್ತು ಪಾವತಿಸುವ ದಿನಾಂಕದವರೆಗೆ ಅನ್ವಯವಾಗುವ ಬಡ್ಡಿಯನ್ನು ವಿಧಿಸಿ ಆಸ್ತಿತೆರಿಗೆಯನ್ನು ಪಾವತಿಸುವಂತೆ ಕಾರಣ ಕೇಳಿ ಪತ್ರವನ್ನು ಸೃಜಿಸಿ, ಮೊಬೈಲ್ ಸಂಖ್ಯೆಗೆ ಸಂದೇಶದ ಮೂಲಕ ಮಾಹಿತಿಯನ್ನು ನೀಡಲಾಗುತ್ತಿರುತ್ತದೆ.

ನಿಗದಿಪಡಿಸಿರುವ ತೆರಿಗೆಯ ಮೇಲೆ ಯಾವುದೇ ಆಕ್ಷೇಪಣೆ ಇದ್ದಲ್ಲಿ ಅಥವಾ ಸದರಿ ಸ್ವತ್ತಿಗೆ ಈಗಾಗಲೇ ಆಸ್ತಿತೆರಿಗೆಯನ್ನು ಪಾವತಿಸಿದ್ದಲ್ಲಿ ನೋಟಿಸ್ ಜಾರಿಯಾದ 15 ದಿನಗಳ ಒಳಗಾಗಿ ಆಕ್ಷೇಪಣೆಯನ್ನು ಸಲ್ಲಿಸಲು ಆನ್‌ಲೈನ್‌ನಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ ಆಕ್ಷೇಪಣೆ ಅರ್ಜಿಯನ್ನು ನಿಯಮಾನುಸಾರ ವಿಚಾರಣೆ ನಡೆಸಿ, ಮುಂದಿನ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

**ಸಂಖ್ಯೆ: ನಅಇ 120 ಬಿಬಿಎಸ್ 2026**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ